**MVC No.218 /2017 C/W 404/2017** **RW-<u>1</u>**

**<u>ದಿನಾಂಕ 12.01.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಃಎದುರುದಾರರ ಪರ ವಕೀಲರಿಂದ ಃ</u>**

ನಾನು ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಆಥಾರೈಸೇಶನ್ ಲೆಟರ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಆರ್-2 ಎಂದು, ಪಾಲಿಸಿ ಕಾಪಿ with terms and conditions ಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್-3 ಎಂದು, ಎದುರುದಾರರಾದ ಆರ್ 1 ರವರಿಗೆ ಕಳುಹಿಸಿದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಆರ್-4 ಎಂದು, ನಿಆರ್-4 ಅನ್ನು ಕಳುಹಿಸಿದ ಬಗ್ಗೆ ಅಂಚೆ ರಶೀದಿಯನ್ನು ಮತ್ತು ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಆರ್-5 ಮತ್ತು ನಿಆರ್-6 ಎಂದು ಗುರುತಿಸಲಾಯಿತು. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನಮ್ಮ ವಿಮಾ ಕಂಪನಿಯಿಂದ ಆಂತರಿಕ ತನಿಖೆ ನಡೆಸಲಾಗಿತ್ತು ಆ ಸಮಯದಲ್ಲಿ ಈ ಅಪಘಾತಕ್ಕೆ ಸಂಬಂದಪಟ್ಟಂತೆ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿದ ಆರೋಪಿ ಶರತ್ ಕೆ ಬಿನ್ ಡಿ. ಕೃಷ್ಣಮೂರ್ತಿ ಅವರನ್ನು ನಮ್ಮ ಆಂತರಿಕ ತನಿಖಾಧಿಕಾರಿಗಳು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ ಸದರಿ ಹೇಳಿಕೆಯನ್ನು ಆರೋಪಿ ಕೊಡುವ ಸಮಯದಲ್ಲಿ ವೀಡಿಯೋಗ್ರಾಫಿ ಮಾಡಿರುತ್ತಾರೆ. ಸದರಿ ಸಿಡಿಯನ್ನು ನಾನು ಹಾಜರುಪಡಿಸಿರುತ್ತೇನೆ. ಸದರಿ ಸಿಡಿಯು ಯಾವುದೇ ರೀತಿಯ tampering ಗೆ ಒಳಗಾಗಿಲ್ಲ ಎನ್ನುವ ಬಗ್ಗೆ Forensic Lab ಯಿಂದ ವರದಿಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು Clue4 Evidence Forensic Investigations Pvt. Ltd. ಯಿಂದ ನೀಡಿದ Sealed

Report ಅನ್ನು ಹಾಜರುಪಡಿಸಿರುತ್ತಾರೆ. ಸದರಿ Sealed Report ಅನ್ನು ತೆರೆದ ನ್ಯಾಯಾಲಯದಲ್ಲಿ ಅರ್ಜಿದಾರರ ಪರ ವಕೀಲರ ಮತ್ತು 2 ನೇ ಎದುರುದಾರರ ಪರ ವಕೀಲರ ಸಮಕ್ಷಮ ತೆರೆಯಲಾಗಿದೆ. ಸದರಿ ಲಕೋಟೆಯೊಳಗೆ ವರದಿ ಮತ್ತು 3 ಸಿಡಿಗಳು ಮತ್ತು ಒಂದು ಪೆನ್ ಡ್ರೈವ್ (Pen Drive) ಇದೆ. ಸದರಿ 3 ಸಿಡಿಗಳು ಈ ಮೇಲೆ ಹೇಳಿದ ವೀಡಿಯೋಗೆ ಸಂಬಂದಪಟ್ಟಿದ್ದಾಗಿರುತ್ತದೆ. ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡ ವೀಡಿಯೋವನ್ನು ಈಗ ನ್ಯಾಯಾಲಯಕ್ಕೆ ನೀಡಿರುವ Pen Drive ಮುಖಾಂತರ ಸಿಡಿಗೆ ಕಾಪಿ ಮಾಡಲಾಗಿರುತ್ತದೆ. ನ್ಯಾಯಾಲಯಕ್ಕೆ ನೀಡಿದ 3 ಸಿಡಿಗಳಲ್ಲಿ ಒಂದು ಸಿಡಿಯನ್ನು ಅರ್ಜಿದಾರರ ಪರ ವಕೀಲರಿಗೆ ನೀಡಲಾಗಿದೆ. ಉಳಿದ 2 ಸಿಡಿಗಳು ನ್ಯಾಯಾಲಯದಲ್ಲಿ ಇರಿಸಲಾಗಿದೆ. (ಸಿಡಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವಂತಹ External DVD write ನಲ್ಲಿ ಹಾಕಿ ಕಂಪ್ಯೂಟರ್ ನಲ್ಲಿ ನೋಡಿ ಅರ್ಜಿದಾರರಿಗೆ ನೀಡಿದಂತಹ ಸಿಡಿಯು ಒಂದೇ ತರಹದ್ದಾಗಿದೆ ಎಂದು ದೃಡೀಕರಣ ಮಾಡಿಕೊಳ್ಳಲಾಗಿದೆ.) ಈ ಮೇಲೆ ಹೇಳಿದ  Forensic Lab ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್-7 ಎಂದು, 2 ಸಿಡಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಆರ್-8 ಮತ್ತು ನಿಆರ್-9 ಎಂದು, Pen Drive (ADATA 8 GB) ಅನ್ನು ಹಾಜರುಪಡಿಸಿದ್ದು ಅದನ್ನು ನಿಆರ್-10 ಎಂದು  ಗುರುತಿಸಲಾಯಿತು. ಸದರಿ ವೀಡಿಯೋ ರೆಕಾರ್ಡ್ ಮಾಡಿದಂತಹ ಆಂತರಿಕ ತನಿಖಾಧಿಕಾರಿಯನ್ನು ನ್ಯಾಯಾಲಯದಲ್ಲಿ ಸಾಕ್ಷಿದಾರರಾಗಿ ವಿಚಾರಣೆಗೆ ಒಳಪಡಿಸುತ್ತೇವೆ.

**<u>ಪಾಟೀ ಸವಾಲು : ಅರ್ಜಿದಾರರ ಪರ ವಕೀಲರಿಂದಃ</u>**

ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ, ಚನ್ನಪಟ್ಟಣ